<u>ಸಾಕ್ಷಿಯನ್ನು ದಿನಾಂಕಃ **21.02.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದು ಪಾಟೀ ಸವಾಲುಃ ವಾದಿ ಪರ ಶ್ರೀ.ಹೆಚ್.ಸಿ.ಪಿ. ವಕೀಲರಿಂದ:</u>

ಪ್ರತಿವಾದಿ ನನ್ನ ದೊಡ್ಡಪ್ಪನ ಮಗನ ಹೆಂಡತಿ ಎಂದು ಹೇಳಿ ಬರೆಸಿದ್ದೇನೆ. 1 ನೇ ಪ್ರತಿವಾದಿಗೆ 2015 ರಲ್ಲಿ ಕ್ರಯವಾಗಿರುತ್ತದೆ . ಸದರಿ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಿನಾಂಕಃ19.03.2015 ರಲ್ಲಿ 1 ನೇ ಪ್ರತಿವಾದಿಗೆ ಜಯರಾಮಯ್ಯ ಮತ್ತು ಅವರ ಮಗ ಕ್ರಯ ಪತ್ರ ಮಾಡಿಕೊಟ್ಟಿದ್ದರುಎಂದರೆ ಸರಿ. ಸಾಕ್ಷಿಗೆ ಸದರಿ ಕ್ರಯ ಪತ್ರದ ಗಣಕೀಕೃತ ಪ್ರತಿಯನ್ನು ತೋರಿಸಿದ ಕಾರಣ ಸಾಕ್ಷಿಯು ಒಪ್ಪಿದ ಕಾರಣ ಅದನ್ನು ನಿಪಿ.**3** ಎಂದು ಗುರುತಿಸಲಾಗಿದೆ. ಸಾಕ್ಷಿಯು ಮುಂದುವರೆದು ತಿದ್ದುಪಡಿ ಪತ್ರ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ತಿದ್ದುಪಡಿ ಪತ್ರವನ್ನು ಹಾಜರುಪಡಿಸಲು ನನಗೆ ಅಡಚಣೆ ಇಲ್ಲ ಆ ರೀತಿ ಯಾವುದೆಪೀ ತಿದ್ದುಪಡಿ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.3 ರಲ್ಲಿ ಪೂರ್ವಕ್ಕೆ ರಸ್ತೆ ಇದ್ದರೂ ಅದು ನಮೂದಾಗಿರುವುದಿಲ್ಲ. ನಿಪಿ.3 ರಲ್ಲಿ 4 ದಿಕ್ಕಿನಲ್ಲಿ ವಾದಿಯ ಹೆಸರು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ವಾದಿಯು ದೊಡ್ಡಮ್ಮನವರಿಂದ ಖರೀದಿ ಮಾಡಿರುತ್ತಾರೆ ಹಾಗೂ ನಿಪಿ.3 ರಲ್ಲಿ ದೊಡ್ಡಮ್ಮರವರ ಹೆಸರು ಇರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಕ್ರಯಕ್ಕೆ ಪಡೆಯುವ ಮೊದಲೇ ವಾದಿಯ ಕ್ರಯ ಪತ್ರವಾಗಿತ್ತು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಕರಯಕ್ಕೆ ಪಡೆಯುವ

ಮೊದಲು ದಾವಾ ಆಸ್ತಿಯಲ್ಲಿ ವಾದಿ ಸ್ವಾಧೀನಾನುಭವದಲ್ಲಿ ಇದ್ದ ಬಗ್ಗೆ ಗೊತ್ತೇ ಎಂದರೆ ಸಾಕ್ಷಿಯು ದೊಡ್ಡಮ್ಮ ಇದ್ದ ಬಗ್ಗೆ ಗೊತ್ತು, ವಾದಿಯ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದೊಡ್ಡಮ್ಮ 47 ½X 20 ಅಡಿ ಸ್ವಾಧೀನಾನುಭವದಲ್ಲಿದ್ದರು. ದೊಡ್ಡಮ್ಮನ ಮಗ ಹೆಚ್.ಟಿ.ದಾಸೇಗೌಡ ಎಂದರೆ ಸರಿ. ದೊಡ್ಡಮ್ಮ ಸ್ವಾಧೀನಾನುಭವದಲ್ಲಿದ್ದ ಪೂರ್ಣ ಆಸ್ತಿಯನ್ನು ವಾದಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿಯಂತೆ ಖರೀದಿ ಮಾಡಿದ ಆಸ್ತಿಯ ಸ್ವಲ್ಪ ಭಾಗದಲ್ಲಿ ವಾದಿ ಇಂದಿರಾ ವಸತಿ ಯೋಜನೆಯಡಿ ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಪೂರ್ಣ ಜಾಗದಲ್ಲಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆಯನ್ನು ವಾದಿಯು ಯಾವುದಾದರೂ ಅನುದಾನದ ವತಿಯಿಂದ ಕಟ್ಟಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಯ ಸ್ವಾಧೀನಾನುಭವದ ಕುರಿತು ಆಗಾಗ್ಗೆ ಗಲಾಟೆ ಆಗುತ್ತಿತ್ತು ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಒಂದು ತಿಂಗಳ ಪೂರ್ವದಲ್ಲಿ ಗಲಾಟೆ ಆಗಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.5 ರಲ್ಲಿ ಪೂರ್ವಕ್ಕೆ ರಸ್ತೆ ಎಂದು ನಮೂದಾಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ವಾಸ್ತವದಲ್ಲಿ ರಸ್ತೆ ಇದೆ ಎಂದು ನುಡಿಯುತ್ತಾರೆ. ನಿಡಿ.5 ರಲ್ಲಿ ಪೂರ್ವಕ್ಕೆ ರಸ್ತೆ ಇರಬೇಕಿತ್ತು ಎಂದು ಸಂಬಂಧಪಟ್ಟವರು ಪ್ರಶ್ನಿಸಲಿ, ನಮಗೆ ದಕ್ಷಿಣಕ್ಕೆ ರಸ್ತೆ ಇತ್ತು ಎಂದು ನುಡಿಯುತ್ತಾರೆ. ನಿಡಿ.15 ಮತ್ತು ನಿಡಿ.17 ನ್ನು ಜರುಗಿಸಲು 1 ನೇ

ಪ್ರತಿವಾದಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಅರ್ಜಿ 1 ನೇ ಪ್ರತಿವಾದಿ ನೀಡಿದ್ದರು ಎಂದು ನಿಡಿ.15 ಮತ್ತು ನಿಡಿ.17 ರಲ್ಲಿ ನಮುದಾಗಿರುವುದಿಲ್ಲ. ಸದರಿ ಅರ್ಜಿಯನ್ನು ಪಿ.ಡಿ.ಒ.ರವರು ನೀಡಿದರೆ ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಿಡಿ.5 ಮತ್ತು ನಿಡಿ.7 ರಿಂದ ನಿಡಿ.14 ರ ದಾಖಲೇಗಳನ್ನು ರಾಜಕೀಯ ಪ್ರಭಾವ ಬಳಸಿ ಒಬ್ಬರೇ ಪಿ.ಡಿ.ಒ.ರವರಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಪ್ರಭಾವ ಬೀರಿ ಒಬ್ಬರೇ ಪಿ.ಡಿ.ಒ ರವರಿಂದ ನಿಡಿ.15 ಮತ್ತು ನಿಡಿ.17 ರಲ್ಲಿ ಸುಳ್ಳು ಮಹಜರ್ ಬರೆಸಿದ್ದೀರಾ ಎಂದರೆ ಸರಿಯಲ್ಲ.

ವಾದಿ ವ್ಯವಸಾಯ ಮಾಡುತ್ತಾರೆ. ವಾದಿಗೆ ವ್ಯವಹಾರಿಕ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ವ್ಯವಹಾರಿಕ ಜ್ಞಾನ ಇಲ್ಲದೇ ಇರುವ ಕಾರಣ ಅದನ್ನು ದುರುಪಯೋಗ ಪಡಿಸಿಕೊಂಡು ನಿಡಿ.5, ನಿಡಿ.7 ರಿಂದ ನಿಡಿ.14 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಕ್ಕಳಿಗೆ ತಿಳಿಯದಂತೆ ನಾನು ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ರಸ್ತೆ ಇಲ್ಲದಿದ್ದರೂ ಇದೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯ ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ 1 ನೇ ಪ್ರತಿವಾದಿ ತೊಂದರೆ ಕೊಡುತ್ತಿದ್ದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಪೂರ್ವಕ್ಕೆ ರಸ್ತೆ ಎಂದು ನಮೂದಾಗಿಲ್ಲ. ವಾದಿಯ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ.1 ರಲ್ಲಿ ತೋರಿಸಿರುವ ಚೆಕ್ಕು ಬಂದಿ ತಪ್ಪು ಇರುತ್ತದೆ.

ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ವಾದಿ ಇದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.